**DW-1**

**ಸಾಕ್ಷಿಯನ್ನು ದಿನಾಂಕಃ 08-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ. ಎಲ್. ನಾಯ್ಕರಿಂದಃ**

ನಾನು ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ. ಪ್ರತಿವಾದಿಯರ ಪೈಕಿ 4 ನೇ ಪ್ರತಿವಾದಿ ದೊಡ್ಡವರು. ನನಗಿಂತಲೂ 4 ನೇ ಪ್ರತಿವಾದಿಗೆ ನಮ್ಮ ಕುಟುಂಬದ ಬಗ್ಗೆ ಮತ್ತು ದಾವಾ ಸ್ವತ್ತುಗಳ ಬಗ್ಗೆ ಚೆನ್ನಾಗಿ ಮಾಹಿತಿ ಇದೆ ಎಂದರೆ ಆಕೆಗಿಂತ ನನಗೇ ಚೆನ್ನಾಗಿ ಗೊತ್ತು ಎನ್ನುತ್ತಾರೆ. ನಾನು 1962 ರಲ್ಲಿ ಹುಟ್ಟಿರುತ್ತೇನೆ. ವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದ್ದೇನೆ. ವಾದಿಯು ಹಾಜರುಪಡಿಸಿರುವ ದಾಖಲೆಗಳಲ್ಲಿ ಸ.ನಂ.264/1 ರ ಸ್ವತ್ತು 1937-38 ರಲ್ಲಿ ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇತ್ತು ಎಂದರೆ ಅದು ಸರಿಯಲ್ಲ. ಇಂತ್ರು ಫಾಸ್ಕಲ್ ಡಯಾಸ್ ರವರು ನಮ್ಮ ಕುಟುಂಬದ ಮೂಲ ಪುರುಷ ಎಂದರೆ ಸರಿ. 1943-44 ರಲ್ಲಿ ಸ.ನಂ.264/1 ರ ಸ್ವತ್ತು ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇದೆ ಎಂದರೆ ಅದು ನನಗೆ ಗೊತ್ತಿಲ್ಲ. ಸ.ನಂ.264/2 ರ ಸ್ವತ್ತು 1937-38 ರಲ್ಲಿ ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. 1943-44 ರಲ್ಲಿ ಸ.ನಂ.264/2 ರ ಸ್ವತ್ತು ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇದೆ ಎಂದರೆ ಅದು ನನಗೆ ಗೊತ್ತಿಲ್ಲ. ಸ.ನಂ.261 ರ ಸ್ವತ್ತು 1942-43 ರಲ್ಲಿ ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಸ.ನಂ.244/1 ರ ಸ್ವತ್ತು 1937-38 ರಲ್ಲಿ ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಸ.ನಂ.242 ರ ಸ್ವತ್ತು 1927-28 ರಲ್ಲಿ ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಸ.ನಂ.242 ರ ಸ್ವತ್ತು 1943-44 ರಲ್ಲಿ ಇಂತ್ರು ಫಾಸ್ಕಲ್ ರವರ ಹೆಸರಿನಲ್ಲಿ ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಭೂನ್ಯಾಯ ಮಂಡಳಿಗೆ ಸಲ್ಲಿಸಿದೆ ಎಂದು ಹೇಳಲಾದ ಫಾರಂ ನಂ.7 ರಲ್ಲಿ ಅವರು ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ ಎಂಬ ಕಾಲಂ ನ್ನು ಮತ್ತು ಕುಟುಂಬದ ವ್ಯಕ್ತಿಗಳು ಕಾಲಂ ನ್ನು ಖಾಲಿ ಬಿಡಲಾಗಿದೆ ಎಂದರೆ ಅದು ನನಗೆ ಗೊತ್ತಿಲ್ಲ. ನಾನು ದಾಖಲೆಗಳನ್ನು ನೋಡಿ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತುಗಳ ಮಂಜೂರಾತಿಗಾಗಿ ನಮ್ಮ ತಂದೆಯವರು ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಂತೆ ತಂದೆಯವರಿಗೆ ಭೂ ನ್ಯಾಯ ಮಂಡಳಿ ಸ್ವತ್ತನ್ನು ಮಂಜೂರಿ ಮಾಡಿದೆ ಎಂದರೆ ಸರಿ. ನಮ್ಮ ತಂದೆಯೇ ಇಂತ್ರು ಫಾಸ್ಕಲ್ ಡಯಾಸರವರಿಗೆ ಹಿರಿಯ ಮಗ ಎಂದರೆ ಸರಿ. ನನ್ನ ತಂದೆಗೆ 2 ಜನ ಹೆಂಡತಿಯರು ಎಂದರೆ ಸರಿ. ನನ್ನ ಅಜ್ಜನ 2 ನೇ ಮಗ ರುಜಾರ್ ಎಂದರೆ ಸರಿ. ನನ್ನ ಅಜ್ಜನಿಗೆ ವಿಲ್ಸಿ, ಜುವಾಂವ್ ಮತ್ತು ನಾತಾಲ್ ಉಳಿದ ಮಕ್ಕಳು ಎಂದರೆ ಸರಿ. ಇಂತ್ರುರವರ 5 ಜನ ಮಕ್ಕಳು ಬದುಕಿಲ್ಲ ಎಂದರೆ ಸರಿ.

ನನ್ನ ತಂದೆಯ ಮೊದಲನೇ ಹೆಂಡತಿಗೆ ಆಶೇಷಾ, 2 ನೇ ಹೆಂಡತಿ ರೋಮಾನ್. ಮೊದಲನೇ ಹೆಂಡತಿಗೆ ಅಂತೋನ್, ಸಂತೋಲಿನ್, ಫರಾಸ್ಕ, ಕತರ್ನಿ, ಅಂತಿಕ್, ನತಲ್, ಅನಮೋರಿ ಮತ್ತು ಇಂತ್ರು ಎನ್ನುವ 8 ಜನ ಮಕ್ಕಳು ಎಂದರೆ ಸರಿ. ಅವರ ಪೈಕಿ ಅಂತೋನ್ ವಿವಾಹ ಆಗದೇ ಮಕ್ಕಳಿಲ್ಲದೇ ಮೃತಪಟ್ಟಿದ್ದಾನೆ. 4 ನೇ ಮಗಳು ಕತರ್ನಿ ಮೃತಪಟ್ಟಿದ್ದು ಆಕೆಗೆ 3 ನೇ ಪ್ರತಿವಾದಿ ಜಾನ್ ಮಗ ಎಂದರೆ ಸರಿ. ನಮ್ಮ ದೊಡ್ಡ ಅಣ್ಣ ಇಂತ್ರು ಮೃತಪಟ್ಟಿದ್ದು 7 ನೇ ಪ್ರತಿವಾದಿ ಜಾನ್ಸನ್ ಆತನ ಮಗ ಎಂದರೆ ಸರಿ.

2 ನೇ ಹೆಂಡತಿಗೆ ಜುಜೆ, ಸಿರಿಲ್, ಲಾಡ್ರು, ಆಗ್ನೇಲ್, ಪ್ರಕಾಶ, ಸುರೇಶ ಮತ್ತು ರೋಜಿ ಎನ್ನುವ 7 ಜನ ಮಕ್ಕಳು ಎಂದರೆ ಸರಿ. 1 ನೇ ವಾದಿ ಆನಾ ನನ್ನ ಚಿಕ್ಕಪ್ಪ ರುಜಾರ್ ಅವರ ಹೆಂಡತಿ ಎಂದರೆ ಸರಿ. 2 ರಿಂದ 6 ನೇ ವಾದಿ ಮತ್ತು ಮೃತ ರೆಮೆಂಡ್ ಆಕೆಯ ಮಕ್ಕಳು ಎಂದರೆ ಸರಿ. ಮೃತ ರೆಮೆಂಡ್‌ಗೆ 7 ನೇ ವಾದಿ ಮಗ ಎಂದರೆ ಸರಿ.

ನನ್ನ ತಂದೆಯ ತಂಗಿ ವಿನ್ಸಿ ಮೃತಪಟ್ಟಿದ್ದು ಆಕೆಯ ಗಂಡ ಮತ್ತು ಮಕ್ಕಳು ಮೃತಪಟ್ಟಿದ್ದಾರೆ. ನಮ್ಮ ತಂದೆಯ ಇನ್ನೊಬ್ಬ ತಂಗಿ ಜುವಾಂವ್ ಮೃತಪಟ್ಟಿದ್ದು ಆಕೆಯ ಗಂಡ ಪಾವ್ಲು ಮತ್ತು ಮಗ ಕೊಸ್ತಾಂವ್ ಸಹ ಮೃತಪಟ್ಟಿದ್ದಾರೆ. ಕೊಸ್ತಾಂವ್‌ಗೆ 2 ಜನ ಗಂಡು ಮಕ್ಕಳು, ಒಂದು ಹೆಣ್ಣುಮಗು ಅವರೆಂದರೆ ಅಶೋಕ, ಸುನಿಲ್, ವಿನಾ.

ನಮ್ಮ ತಂದೆಯ ಕೊನೆಯ ತಂಗಿ ನತಾಲ್ ಸಹ ಮೃತಪಟ್ಟಿದ್ದು ಆಕೆಗೆ 15 ರಿಂದ 18 ನೇ ಪ್ರತಿವಾದಿಯರು ಮಕ್ಕಳು ಎಂದರೆ ಸರಿ.

ವಾದಿಯರು ಹಾಜರುಪಡಿಸಿರುವ ವಂಶಾವಳಿಯನ್ನು ನೋಡಿದ್ದೇನೆ. ವಾದಿಯು ತೋರಿಸಿದ ವಂಶಾವಳಿಯು ಸರಿ ಇದೆ. ವಾದಿಯು ತೋರಿಸಿರುವ ವಂಶಾವಳಿ ಸರಿ ಇಲ್ಲ ಅಂತ ನನ್ನ ವಕೀಲರಿಗೆ ಹೇಳಿಲ್ಲ. ವಕೀಲರು ತಯಾರು ಮಾಡಿರುವ ತಕರರನ್ನು ನಾನು ಸಹಿ ಮಾಡುವ ಪೂರ್ವದಲ್ಲಿ ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ವಾದಿಯ ವಂಶಾವಳಿ ಸರಿ ಇಲ್ಲ ಅಂತ ಸುಳ್ಳು ತಕರಾರು ಹಾಕಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳನ್ನು ನಮ್ಮ ತಂದೆಯ ಜೊತೆಯಲ್ಲಿ ಚಿಕ್ಕಪ್ಪಂದಿರೂ ಸಹ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1948 ರಿಂದ ನಮ್ಮ ತಂದೆ ಒಬ್ಬರೇ ಉಳುಮೆ ಮಾಡುತ್ತಿದ್ದಾರೆ. ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನಮ್ಮ ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ. ನಮ್ಮ ಪಡಿತರ ಚೀಟಿ ಗೋವಾದಲ್ಲಿ ಇದೆ. ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಒಂದೇ ಕುಟುಂಬದಲ್ಲಿ ಇದ್ದದ್ದರಿಂದಲೇ ಉದ್ದೇಶಪೂರ್ವಕಾಗಿ ಪಡಿತರ ಚೀಟಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೂ ಮೊದಲು ಸ್ವತ್ತುಗಳನ್ನು ನಮ್ಮ ಅಜ್ಜ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ನಮ್ಮ ಅಜ್ಜನನ್ನು ನೋಡಿಲ್ಲ. ನಾನು ನೋಡಿದಾಗಿನಿಂದ 1948 ರಿಂದ ನಮ್ಮ ತಂದೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ. ನಮ್ಮ ಅಜ್ಜನ ಜೊತೆಯಲ್ಲಿ ಯಾರೆಲ್ಲ ವಾಸವಾಗಿದ್ದರು ನನಗೆ ಗೊತ್ತಿಲ್ಲ. ನಮ್ಮ ಅಜ್ಜ, ತಂದೆ ಹಾಗೂ ಅಣ್ಣತಮ್ಮಂದಿರು ಒಟ್ಟಾಗಿ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಮ್ಮ ಕುಟುಂಬದ ಆಸ್ತಿಗಳೇ ಹೊರತೂ ತಂದೆಯ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳನ್ನು ನಮ್ಮ ಕುಟುಂಬದ ಒಳಗೆ ನಾವು ಅಣ್ಣತಮ್ಮಂದಿರು ವಾಂಟಣಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ವಾಂಟಣೆಗೆ ವಾದಿಯರು ಪಕ್ಷಗಾರರಲ್ಲ ಎಂದರೆ ಸರಿ. ಸದರಿ ವಾಂಟಣಿಯಲ್ಲಿ ವಾದಿಯರಿಗೆ ಯಾವುದೇ ಹಿಸ್ಸೆ ಕೊಟ್ಟಿಲ್ಲ ಎಂದರೆ ಸರಿ. ನಾವು ವಾಂಟಣಿ ಮಾಡಿಕೊಳ್ಳುವ ಕಾಲಕ್ಕೆ ವಾದಿಯರನ್ನು ಕೇಳಿಲ್ಲ. ವಾದಿಯರ ಬೆನ್ನ ಹಿಂದೆ ಸದರಿ ವಾಂಟಣಿ

ಮಾಡಿಕೊಂಡಿದ್ದೇವೆ ಎಂದರೆ ಸರಿ. ನನ್ನ ಭಾಗಕ್ಕೆ ಬಂದ ಆಸ್ತಿಯನ್ನು ನಾನು ಈಗಾಗಲೇ ರಮಾನಂದ ಗಣಪತಿ ನಾಯ್ಕರವರಿಗೆ ಮಾರಾಟ ಮಾಡಿದ್ದೇನೆ. ಮಾರಾಟ ಮಾಡುವ ವಿಚಾರವನ್ನು ವಾದಿಯರಿಗೆ ತಿಳಿಸಿಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ಸ್ವತ್ತನ್ನು ವಿಭಾಗ ಮಾಡಿಕೊಡು ಎಂದು ವಾದಿಯರು ನನಗೆ ಕೇಳಿದ್ದರು ಎಂದರೆ ಸರಿ. ಆಗ ಸ್ವತ್ತುಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ನಿಮಗೆ ಹಕ್ಕಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ದಾವಾ ಸ್ವತ್ತುಗಳು ಅಜ್ಜನಿಂದ ಬಂದ ಆಸ್ತಿಗಳಾಗಿದ್ದರೂ ತಂದೆಯಿಂದ ಬಂದ ಆಸ್ತಿಗಳು ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಕುಟುಂಬದ ಪರವಾಗಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**